Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 41/2016

ಪ್ರಾ.ಸಾ. 3 ಚಾ.ಸಾ. 3

| | | |
|---|---|---|
| ಹೆಸರು | : | ಪ್ರವಿಣಕುಮಾರ |
| ತಂದೆಯ ಹೆಸರು | : | ಅಶೋಕ ಸಿಂದೆ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಅಧೀಕ್ಷಕರು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ದೇವದುರ್ಗಾ |
| ವಾಸ | : | ದೇವದುರ್ಗಾ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 28-03-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು ಮೇ 2012 ರಿಂದ ಅಗಸ್ಟ 2017 ರ ವರೆಗೆ ಜಂಟಿ ಕೃಷಿ ನಿರ್ದೇಶಕರು ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 28.02.2015 ರಂದು ಲೋಕಾಯುಕ್ತ ಠಾಣೆಯಿಂದ ನಮ್ಮ ಮೇಲಾಧಿಕಾರಿಯವರಿಗೆ ಒಂದು ಪತ್ರ ಬಂದಿದ್ದು ನಮ್ಮ ಮೇಲಾಧಿಕಾರಿಗಳ ಸೂಚನೆಯ ಮೇರೆಗೆ ಬೆಳಿಗ್ಗೆ 11-30 ಗಂಟೆಗೆ ಲೋಕಾಯುಕ್ತ ಕಛೇರಿಗೆ ಹೋಗಿರುತ್ತೇನೆ. ಸದರಿ ದಾಖಲೆ ನಿ.ಪಿ.28 ಆಗಿರುತ್ತದೆ. ಅಲ್ಲಿ ಬಿ.ಬಿ. ಪಟೇಲ ಪಿಐ ಅವರು ನನ್ನನ್ನು ಪರಿಚಯ ಮಾಡಿಕೊಂಡರು. ಅವರ ಮುಂದೆ ಕುಳಿತ್ತಿದ್ದ ರಂಗಪ್ಪ ಎನ್ನುವವರನ್ನು ಪರಿಚಯ ಮಾಡಿಕೊಟ್ಟರು. ರಂಗಪ್ಪ ಎನ್ನುವವರು ಲಕ್ಷ್ಮಿ ಬಾಯಿ ಅವರ ಸರ್ವೆ ನಂ. 184 ರ 2 ಎಕರೆ 13 ಗುಂಟೆ ಜಮೀನನ್ನು ಕೊಂಡುಕೊಡಿದ್ದು ಆ ಬಗ್ಗೆ 11-ಇ ಸ್ಕೆಚ್ ತಯಾರಿಸಿ ಕೊಡುವ ಸಂಬಂಧ ಸರ್ವೆ ಇಲಾಖೆಗೆ ಅರ್ಜಿಕೊಟ್ಟಿದ್ದು ಮಾಳಪ್ಪ ಅವರಿಗೆ ಆ ಕೆಲಸ ಸರ್ವೆ ಇಲಾಖೆಯಿಂದ ನೇಮಕವಾಗಿದ್ದು ಅವರು ಸರ್ವೆ ಮಾಡಿಕೊಡಲು 5,000/- ರೂ ಲಂಚ ಕೇಳಿದ್ದಾಗಿ ಹೇಳಿದರು ಆ ಪೈಕಿ ಮೊದಲು 2,000/- ರೂ ಕೊಟ್ಟಿದ್ದು ಉಳಿದ 3,000/- ರೂ ಕೊಡುವದು ಬಾಕಿ ಇದ್ದು ಆ ಬಗ್ಗೆ ಲಂಚ ಇಷ್ಟ ಇಲ್ಲದೇ ದೂರು ಕೊಟ್ಟಿದ್ದಾಗಿ ಹೇಳಿದರು. ಆತ ಕೊಟ್ಟ ದೂರನ್ನು ನಮಗೆ ಕೊಟ್ಟು ಓದಲು ಹೇಳಿದರು ಅದರಲ್ಲಿ ಅದೇ ವಿಷಯ ಇತ್ತು. ನಮ್ಮ ಕಛೇರಿಯಿಂದ ಮತ್ತೊಬ್ಬ ಪಂಚ ಬಸವರಾಜ

ಅವರು ಸಹ ಬಂದಿದ್ದು ನಾವಿಬ್ಬರೂ ಒಪ್ಪಿಕೊಂಡೆವು. ರಂಗಪ್ಪ ಅವರ ಬಳಿ ಇದ್ದ ಮೊಬೈಲನಲ್ಲಿ ಸಂಭಾಷಣೆ ಇದ್ದು ಅದನ್ನು ಕೇಳಿಸಿದರು. ಆ ಮಾಹಿತಿಯನ್ನು ಅಲ್ಲಿಯೇ ಇದ್ದ ಪೊಲೀಸರಿಗೆ ಬರೆದುಕೊಳ್ಳಲು ಹೇಳಿದ್ದು ಅವರು ಬರೆದುಕೊಂಡರು. ಆ ದಾಖಲೆಯಲ್ಲಿ ನಾನು ಸಹಿ ಮಾಡಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.19(ಬಿ) ಎಂದು ಗುರುತಿಸಲಾಯಿತು. ಸದರಿ ಧ್ವನಿ ಮುದ್ರಿಕೆಯನ್ನು ಕಂಪ್ಯೂಟರಗೆ ಹಾಕಿ ಸಿ.ಡಿ. ಮಾಡಿ ಅದನ್ನು ಸೀಲ್ ಮಾಡಿ ಆರ್ಟಿಕಲ್-1 ಎಂದು ನಂಬರ ಕೊಟ್ಟಿದ್ದು ಅದನ್ನು ಮು.ಮಾ.5 ಎಂದು ಗುರುತಿಸಲಾಗಿದೆ. ಫಿರ್ಯಾದಿಯನ್ನು ಲಂಚದ ಹಣ ತೆಗೆದುಕೊಡುವಂತೆ ಕೇಳಿದರು. ಆಗ ಫಿರ್ಯಾದಿ 500/- ಮುಖ ಬೆಲೆಯ 6 ನೋಟುಗಳನ್ನು ಇನ್ಸಪೆಕ್ಟರ ಅವರು ನನ್ನ ಕೈಗೆ ಕೊಡುವಂತೆ ಹೇಳಿದರು. ನಾನು ಆ ನೋಟುಗಳನ್ನು  ಪರೀಕ್ಷೆ ಮಾಡಿ ಅದರಲ್ಲಿದ್ದ ನಂಬರಗಳನ್ನು ಬಸವರಾಜ ಅವರಿಗೆ ಹೇಳಿದ್ದು ಅವರು ಬರೆದುಕೊಂಡರು ಆ ಬಗ್ಗೆ ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.29(ಬಿ) ಎಂದು ಗುರುತಿಸಲಾಯಿತು. ಅಲ್ಲಿ ಕಛೇರಿಯಲ್ಲಿದ್ದ 2 ಪ್ಲಾಸ್ಟಿಕ ಡಬ್ಬಿಗಳನ್ನು ತೋರಿಸಿದಲ್ದು ಒಂದರಲ್ಲಿ ಪಿನಾಪ್ತಲಿನ ಪೌಡರ ಮತ್ತು ಇನ್ನೊಂದರಲ್ಲಿ ಸೋಡಿಯಂ ಕಾರ್ಬೋನೇಟ ಇರುವುವದಾಗಿ ಹೇಳಿ ಅವುಗಳ ಗುಣದರ್ಮ ವಿವರಿಸಿದರು. ಅಲ್ಲಿದ್ದ ಪೇದೆಯನ್ನು ಕರೆದು ನೋಟುಗಳ ಮೇಲೆ ಫಿನಾಪ್ತಲಿನ ಪೌಡರ ಹಚ್ಚಲು ಹೇಳಿದರು. ನಂತರ ಆ ನೋಟುಗಳನ್ನು ನನ್ನ ಕೈಗೆ ಕೊಡುವಂತೆ ಪಿಐ ಅವರು ಹೇಳಿದರು. ರಂಗಪ್ಪ ಅವರ ಜೇಬಿನಲ್ಲಿ ಯಾವುದೇ ದಾಖಲೆ ಹಣ ಇಲ್ಲ ಎಂದು ಖಚಿತ ಪಡಿಸಿಕೊಂಡು ಆ ನೋಟುಗಳನ್ನು ಎಣಿಸಿ ಆ ಜೇಬಿನಲ್ಲಿ ಇಟ್ಟಿದ್ದೇನೆ. ಅಲ್ಲಿ ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ನನ್ನ ಕೈ ಬೆರಳುಗಳನ್ನು ಅದ್ದಿಸಿದಾಗ ಆ ಸೋಡಿಯಂ ಕಾರ್ಬೋನೇಟ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಅವುಗಳನ್ನು ಬಾಟಲಿಗೆ ಹಾಕಿ ಸೀಲ್ ಮಾಡಿದ್ದು ಅದು ಆರ್ಟಿಕಲ್-2 ಆಗಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಗಿದೆ. ಮಾಳಪ್ಪ ಹಣ ಪಡೆದಾಗ ಇದೆ ರೀತಿ ಆಗುತ್ತದೆ ಎಂದು ಹೇಳಿದರು. ಆರೋಪಿ ಹಣವನ್ನು ಕೇಳಿದಾಗ ಆತನ ಕೈಗೆ ಕೊಡಿ ಅಥವಾ ಅವರು ಹೇಳಿದ ಜಾಗದಲ್ಲಿ ಇಡಿ ಎಂದು ಫಿರ್ಯಾದಿಗೆ ತಿಳಿಸಿ ಹೇಳಿದರು. ನೆರಳು ಸಾಕ್ಷಿ ಬಸವರಾಜ ಇವರಿಗೆ ಫಿರ್ಯಾದಿ ಜೊತೆಗೆ ಹೋಗುವಂತೆ ಹೇಳಿದರು. ವೈಸ ರೇಕಾರ್ಡರನ್ನು ಯಾವ ರೀತಿ ಉಪಯೋಗಿಸಬೇಕು ಎಂದು ಹೇಳಿ ಫಿರ್ಯಾದಿ ಕೊಟ್ಟಿರುತ್ತಾರೆ. ಬಸವರಾಜ ಅವರಿಗೆ ಆ ಘಟನೆಯನ್ನು ವಿಕ್ಷಿಸಿ ಕೇಳಿದಾಗ ಹೇಳುವಂತೆ ಹೇಳಿದರು. ಈ ಪ್ರಕ್ರಿಯೇ ನಡೆದ ನಂತರ ಫಿರ್ಯಾದಿ ಹೊರಗೆ ಬಂದು ನಮಗೆ ಮಾಹಿತಿ ಕೊಡಬೇಕು ಎಂದು ತಿಳಿಸಿದರು. ಈ ಬಗ್ಗೆ ವಿಡಿಯೋ ಮತ್ತು ಫೋಟೊಗಳನ್ನು ತೆಗೆದಿರುತ್ತಾರೆ. ಸದರಿ ಫೋಟೊಗಳು ನಿ.ಪಿ.3 ರಿಂದ 17 ಆಗಿರುತ್ತವೆ. ಈ ಘಟನೆ ಬೆಳಿಗ್ಗೆ 11-45 ರಿಂದ 12-45 ರ ವರೆಗೆ ಆಯಿತು. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ ಸಾಕ್ಷಿಯ ಸಹಿಯನ್ನು ನಿ.ಪಿ.18(ಸಿ) ಎಂದು ಗುರುತಿಸಲಾಯಿತು.

3. ಅದೇ ದಿನ ಮಧ್ಯಾಹ್ನ 1-00 ಗಂಟೆಗೆ ನಾವೆಲ್ಲರೂ ಸೇರಿ ಎರಡು ವಾಹನಗಳಲ್ಲಿ ಹೊದೆವು. ನಾನು 3 ಜನ ಪೇದೆಗಳು ಸರಕಾರಿ ವಾಹನದಲ್ಲಿ ಮತ್ತು ಪಿಐ, ನೆರಳು, ಸಾಕ್ಷಿ, ಪೇದೆ ಇವರುಗಳು ಖಾಸಗಿ ವಾಹನದಲ್ಲಿ ಹಸನಾಪೂರ ಕ್ರಾಸಗೆ ಹೋದೆವು. ಅಲ್ಲಿ ತನಿಖಾಧಿಕಾರಿಯವರು ಫಿರ್ಯಾದಿಗೆ ಆರೋಪಿಗೆ ಫೋನ್ ಮಾಡಿ ತಿಳಿದುಕೊಳ್ಳುವಂತೆ ಹೇಳಿದರು. ಆಗ ಆರೋಪಿ ಸಿದ್ದಾಪೂರದಲ್ಲಿದ್ದೇನೆ ಅರ್ಧಾ ಗಂಟೆ ಬಿಟ್ಟು ಸುರಪೂರಕ್ಕೆ ಬರುತ್ತೇನೆ ಎಂದು ಹೇಳಿದರು. ಮತ್ತೊಮ್ಮೆ ಏನು ಮಾಡಬೇಕು ಎಂದು ತನಿಖಾಧಿಕಾರಿ ಫಿರ್ಯಾದಿ ಹಾಗೂ ನೆರಳು ಸಾಕ್ಷಿಗೆ ಸಲಹೆ ಸೂಚನೆಗಳನ್ನು ಕೊಟ್ಟರು. ನಾನು, ಮತ್ತು ಪೇದೆ ಸುರಪೂರ ಪಟ್ಟಣದ ವೇಣುಗೋಪಾಲ ಸ್ವಾಮಿ ಗುಡಿಯ ಹತ್ತಿರ ಮಧ್ಯಾಹ್ನ 2-30 ಗಂಟೆಗೆ ಹೋಗಿ ನಿಂತೆವು. ಮಧ್ಯಾಹ್ನ 3-30 ಗಂಟೆಗೆ ಫಿರ್ಯಾದಿಗೆ ಆರೋಪಿಯಿಂದ ಫೋನ್ ಬಂತು. ಸುರಪೂರದ ಗಾಂಧಿ ಚೌಕ ಬಳಿ ಇರುವ ಸಂಜು ಜ್ಯೂಸ ಸೆಂಟರ ಬಳಿ ಬರುವಂತೆ ಆರೋಪಿ ತಿಳಿಸಿದಂತೆ ನಾವುಗಳು ಹೋಗಿ ಯಾರಿಗೂ ಅನುಮಾನ ಬರಂತೆ ಅಲಲ್ಲಿ ನಿಂತುಕೊಂಡೆವು. ಮಧ್ಯಾಹ್ನ 3-40 ಗಂಟೆಗೆ ರಂಗಪ್ಪ ಅವರು ಸಂಜು ಜ್ಯೂಸ ಸೆಂಟರನಿಂದ ಹೊರಗೆ ಬಂದು ಮುಖ ಒರೆಸಿಕೊಳ್ಳುವ ಸೂಚನೆ ನೀಡಿದರು. ತಕ್ಷಣ ನಾವು ಮತ್ತು ಪಿಐ ಮತ್ತು ಇತರ ಸಿಬ್ಬಂದಿಗಳು ಜ್ಯೂಸ ಸೆಂಟರ ಒಳಗೆ ಹೋದೆವು. ಆಗ ಫಿರ್ಯಾದಿ ರಂಗಪ್ಪ ಆರೋಪಿಯನ್ನು ತೋರಿಸಿ ಈತನೇ ಮಾಳಪ್ಪ ಎಂದು ಹೇಳಿದ. ಇವರೆ ನನ್ನ ಬಳಿ 3,000/-ರೂ ಲಂಚ ತೆಗೆದುಕೊಂಡಿದ್ದು ಎಂದು ಹೇಳಿದ. ಇಬ್ಬರು ಆರೋಪಿಗಳು ಆತನ ಕೈಗಳನ್ನು ಹಿಡಿದುಕೊಂಡರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪಿಐ ಅವರು ನಾವು ಲೋಕಾಯುಕ್ತ ಇನ್ಸಪೇಕ್ಟರ ಎಂದು ಪರಿಚಯ ಮಾಡಿಸಿಕೊಂಡರು. ಲಂಚ ಪಡೆದುಕೊಂಡಿದ್ದರಿಂದ ನಿಮ್ಮನ್ನು ಟ್ರ್ಯಾಪ ಮಾಡಿದ್ದೇವೆ ಎಂದು ಆರೋಪಿಗೆ ತಿಳಿಸಿದರು.

ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.